ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೫೧ Volume 151	ಬೆಂಗಳೂರು, ಗುರುವಾರ, ಏಪ್ರಿಲ್ ೨೧, ೨೦೧೬ (ವೈಶಾಖ ೧, ಶಕ ವರ್ಷ ೧೯೩೮) Bengaluru, Thursday, April 21, 2016 (Vaishakha 1, Shaka Varsha 1938)	ಸಂಚಿಕೆ ೧೬ Issue 16

ಭಾಗ ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

ವಸತಿ ಸಚಿವಾಲಯ

ಪೂರ್ವಭಾವಿ ಅಧಿಸೂಚನೆ

ಸಂಖ್ಯೆ: ವಇ/129/ಕೊಮಂಇ/2015, ಬೆಂಗಳೂರು, ದಿನಾಂಕ: 24-03-2016.

ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಬೆಂಗಳೂರು ನಗರದ ಹೆಬ್ಬಾಳ ವಿಧಾನಸಭಾ ವ್ಯಾಪ್ತಿಯ ಬಿನ್ನಿಮಿಲ್ ಹಿಂಭಾಗದ ಗಂಗೇನಹಳ್ಳಿ ಕೊಳಚೆ ಪ್ರದೇಶವನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ತಮ್ಮ ತಿದ್ದುಪಡಿ ಅಂತಿಮ ಅಧಿಸೂಚನೆ ಸಂಖ್ಯೆ: ಕೆ.ಎಸ್.ಎ./ಸಿಆರ್:10/94-95, ದಿನಾಂಕ: 30-07-2015ರಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 (1974ರ ಕರ್ನಾಟಕ ಕಾಯ್ದೆ 33ರಂತೆ) ಕಲಂ-3ರನ್ವಯ ಕೊಳಚೆ ಪ್ರದೇಶವೆಂದು ಘೋಷಿಸಿರುತ್ತಾರೆ.

ಸದರಿ ಕೊಳಚೆ ಪ್ರದೇಶವನ್ನು ಅಭಿವೃದ್ಧಿಗೊಳಿಸಿ ಅಲ್ಲಿ ವಾಸಿಸುವ ಕೊಳಚೆ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರವು ಉದ್ದೇಶಿಸಿದ್ದು, ಅದಕ್ಕಾಗಿ ಸದರಿ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 ಕಲಂ-17 ರಂತೆ ಭೂಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯಕವಾಗಿದೆ ಎಂದು ಸರ್ಕಾರವು ಮನಗಂಡಿದೆ. ಆದ್ದರಿಂದ ಸದರಿ ಪ್ರದೇಶವು ಸಂಬಂಧಿಸಿದವರಿಗೆ ಸಾರ್ವಜನಿಕರಿಗೆ/ಆಸಕ್ತಿಯುಳ್ಳವರಿಗೆ ಈ ಮೂಲಕ ಸೂಚನೆಯನ್ನು ನೀಡಿ, ಸದರಿ ಪ್ರದೇಶವನ್ನು ಭೂಸ್ವಾಧೀನ ಮಾಡಬಾರದೆಂಬುದಕ್ಕೆ ಕಾರಣ/ಆಕ್ಷೇಪಣೆ/ಸಲಹೆ ಮತ್ತು ಮನವಿಗಳಿದ್ದಲ್ಲಿ, ಈ ಪೂರ್ವಭಾವಿ ಅಧಿಸೂಚನೆ ಪ್ರಕಟವಾದ 15 ದಿನಗಳೊಳಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌಧ, ಬೆಂಗಳೂರು-01 ಇವರಿಗೆ ಸಲ್ಲಿಸಬಹುದು.

ಷೆಡ್ಯೂಲ್

ಕೊಳಚೆ ಪ್ರದೇಶದ ಹೆಸರು	ಭೂಮಾಲೀಕರ ಹೆಸರು	ಸರ್ವೆ ನಂ	ವಿಸ್ತೀರ್ಣ (ಎ/ಗು)	ಚೆಕ್ಕುಬಂದಿ (ಸರ್ವೆ ನಂ)			
				(ಪೂರ್ವ)	(ಪಶ್ಚಿಮ)	(ಉತ್ತರ)	(ದಕ್ಷಿಣ)
ಬಿನ್ನಿಮಿಲ್ ಹಿಂಭಾಗದ ಗಂಗೇನಹಳ್ಳಿ ಕೊಳಚೆ ಪ್ರದೇಶ	1. ಲಕ್ಷ್ಮಿ ಎಂಟರ್‌ಪ್ರೈಸಸ್ 2. ಮೀನಾ ಎಂಟರ್‌ಪ್ರೈಸಸ್ 3. ವಿ.ವಿ. ಎಂಟರ್‌ಪ್ರೈಸಸ್	22/1 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಖಾತೆ ನಂ.15/5,15/6,15/7	0.27 ಗುಂಟೆ	ಚರಂಡಿ	ರಸ್ತೆ	ಖಾಸಗಿ ಮನೆಗಳು	ಚರಂಡಿ ಮತ್ತು ಗಲ್ಲಿ ರಸ್ತೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಮೀರ್ ಮಡಿಮನ್,

ಸರ್ಕಾರದ ಅಧೀನ ಕಾರ್ಯದರ್ಶಿ-2,

ವಸತಿ ಇಲಾಖೆ.

P.R. 19

SC - 50

ಆಯುಕ್ತರು, ಪುನರವಸತಿ, ಪುನರ್‌ನಿರ್ಮಾಣ ಹಾಗೂ ಭೂಸ್ವಾಧೀನ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಕೃ.ಮೇ.ಯೊ, ಬಾಗಲಕೋಟೆ.

ಭೂಸ್ವಾಧೀನ ಕಾಯ್ದೆಯ ಕಲಂ 17ರೊಂದಿಗೆ ಓದಲಾದ ಪ್ರಕರಣ 6ರ ಅನ್ವಯ ಘೋಷಣೆ.

ಸಂ.ಎಲ್.ಎ.ಕ್ಯೂ.Iಸಿಆರ್–61/2014–15, ಬಾಗಲಕೋಟೆ, ದಿನಾಂಕ: 31–01–2015.

ಭಾರತ ಸರ್ಕಾರವು " The Right to fair compensation and Transparency in Land Acquisition, Rehabilitation and Resettlement Act- 2013ನ್ನು ದಿನಾಂಕ: 01–01–2014 ರಂದು ಜಾರಿಗೆ ಬಂದಿರುವುದರಿಂದ ಈ ಹಿಂದಿನ ಭೂಸ್ವಾಧೀನ ಕಾಯ್ದೆ 1984 ರನ್ವಯ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡಿದ್ದು, ವಿವಿಧ ಹಂತಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಗಳನ್ನು ಹಳೆಯಕಾಯ್ದೆಯ ಅನ್ವಯವೇ ಮುಂದುವರಿಸುವ ಅಥವಾ ಹೊಸ ಕಾಯ್ದೆಯನ್ನು ಅನ್ವಯಿಸುವ ಕುರಿತಂತೆ ಹೊಸ ಕಾಯ್ದೆ 2013 ಕಲಂ 24, 103 ಮತ್ತು 114 ಹಾಗೂ The General Clauses Act 1897ರ ಸೆಕ್ಷನ್–6 ರನ್ವಯ ಪರಿಶೀಲಿಸಿ ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಕರ್ನಾಟಕ ಸರ್ಕಾರದ 1961 ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರ.ಸಂ.17ರಲ್ಲಿ ತಿದ್ದುಪಡಿ ಮಾಡಲಾದ 1894ನೇ ಭೂಸ್ವಾ ಅಧಿನಿಯಮ (1894 ನೇ ಕೇಂದ್ರ ಅಧಿನಿಯಮ) ಪ್ರಕರಣ 6ರ ಅನ್ವಯ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ತುಂಗಾ ಮೇಲ್ದಂಡೆ ಯೋಜನೆಯ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಕುರಿತು ಬೇಕಾಗಿರುವುದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ (ಸಿ) ಖಂಡದ ಮೇರೆಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರನ್ನು ಸದರಿ ಜಮೀನಿನಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳರವರ ಪ್ರಕಾಶನ ಕಾರ್ಯಗಳನ್ನು ನಿರ್ವಹಿಸುವಂತೆ ಈ ಮೂಲಕ ನಿಯಮಿಸಲಾಗಿದೆ. ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ ಪ್ರಕರಣ 7ರ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಅಧಿನಿಯಮ 6ನೇ ಪ್ರಕರಣ ಉಪ–ಪ್ರಕರಣ (1)ರಲ್ಲಿ ಪ್ರಕಟಿಸಲಾದ ಈ ನೋಟಿಸಿನ ಪ್ರಕಟಣೆ ನಂತರ 15 ದಿವಸಗಳಿಗೆ ಮುಂಚಿತವಾಗಿ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕೆಂದು ಸದರಿ ಅಧಿನಿಯಮ 17ನೇ ಪ್ರಕರಣದ (1) ಉಪ–ಪ್ರಕರಣ ಮೇರೆಗೆ ಕರ್ನಾಟಕ ಸರ್ಕಾರ ನಿರ್ದೇಶಿಸಿದೆ.

ಸದರಿ ಜಮೀನಿನ ವಿವರವನ್ನು ಸೂಚಿಸುವ ಒಂದು ನಕಾಶೆಯನ್ನು ಆಸಕ್ತಿ ಜನರ ಅವಗಾಹನೆಗಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರ ಕಛೇರಿಯಲ್ಲಿ ಇಡಲಾಗಿದೆ.

ಅನುಸೂಚಿ

ಗ್ರಾಮ: ಲಿಂಗಾಪುರ **ತಾಲ್ಲೂಕು: ತೀರ್ಥಹಳ್ಳಿ** **ಜಿಲ್ಲಾ: ಶಿವಮೊಗ್ಗ** **ಹೋಬಳಿ: ಮಂಡಗದ್ದೆ**

ಅ. ನಂ	ಭೂಮಾಲಿಕರ ಹೆಸರು	ಅನುಭವದಾರರ ಹೆಸರು	ಸರ್ವೆ ನಂಬರ್	ಜಮೀನಿನ ತರಹೆ	ಸರಹದ್ದು				ಜಮೀನಿನ ಕ್ಷೇತ್ರ ಎ.ಗು.	ಆಕಾರ ರೂ.ಪೈ	ಗಿಡ ಮರ ಕಟ್ಟಡ
					ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ನಂ.	ದಕ್ಷಿಣ ಸ.ನಂ.			
1	2	3	4	5	6	7	8	9	10	11	12
1	ಹಾಜಿರಾಬಾನು ಕೋಂ ಎಂ.ರಶೀದ್ ಖಾನ್	ಸ್ವಂತ	108	ಸ.ನಿ.ತರಿ	ಗ್ರಾಮ ಠಾಣ	108 ಉಳಿಕೆ	111	ಗ್ರಾಮಠಾಣ	1–10	6–25	ಅಕೇಶಿಯಸಸಿ–25 ಅಡಿಕೆ ಸಸಿ–200 ತೆಂಗುಸಸಿ–20
2	ಅಬ್ದುಲ್ ಗನಿ ಬಿನ್ ಅಬ್ದುಲ್ ಖಾಲಿಕ್	ಸ್ವಂತ	111/1	ಸ.ನಿ. ತರಿ	ಗ್ರಾಮ ಠಾಣ	110	111/2	108	1–15	6–58	ಅಡಿಕೆ–600 ತೆಂಗು–60

1	2	3	4	5	6	7	8	9	10	11	12
3	ಅಬ್ದುಲ್ ಮಜೀದ್ ಬಿನ್ ಅಬ್ದುಲ್ ಖಾಲಿಕ್	ದಿನೇಶ್‌ಕುಮಾರ್ ಪಿ ಜೈನ್ ಬಿನ್	111/2	ಸ.ನಿ.	ಗ್ರಾಮ ಠಾಣ	110	112	111/1	1–15	6–57	–
4	ಕರ್ನಾಟಕ ಸರ್ಕಾರ	ಸರ್ಕಾರ	112/ ಬ್ಲಾಕ್–1	ಸ.ನಿ.ತರಿ	ರಸ್ತೆ	112ರ ಉಳಿಕೆ	128	111	2–32 ಪಿ.ಕೆ.0–02	13–99	–
	1. ಸೈಯದ್ ಸಿರಾಜ್ ಬಿನ್ ಅಕ್ಬರ್	ಸ್ವಂತ	112/ ಬ್ಲಾಕ್–4	ಸ.ನಿ.ತರಿ	112ರ ಉಳಿಕೆ	127, 114	128	ಮೈಮುನ್ನಿಸಾ ಜಮೀನು	0–35	4–38	–
	2. ಸೈಯದ್ ಅರಬ್ ಜಾನ್ ಯಾನೆ ಅರಬ್ ಜಾನ್ ಬಿನ್ ಸೈಯದ್ ಅತಾಸ್. 3. ಗುಲ್ಜಾರ್ ಬಿನ್ ಸೈಯದ್ ಅತಾಸ್ ಮೈ.ಗಾ. ಅಣ್ಣ ಸೈಯದ್ ಅರಬ್‌ಜಾನ್.	ಸ್ವಂತ	112/ ಬ್ಲಾಕ್–2	ಸ.ನಿ.ತರಿ	112ರ ಉಳಿಕೆ	127,	ಮೈಮುನ್ನಿಸಾ ಜಮೀನು	111	0–35	4–38	–
	4. ಮೈಮುನ್ನೀಸಾ ಕೋಂ ಸೈಯದ್ ನಾಸೀರ್ ಯಾನೆ ಸೈಯದ್ ನಜೀರ್. ತಾಸೀನಾ ಬಿನ್ ಸೈಯದ್ ನಾಶಿರ್ ಯಾನೆ ಸೈಯದ್ ನಜೀರ್ ನಸ್ರೀನಾ ಬಿನ್ ಸೈಯದ್‌ನಾಸಿರ್ ಮೈ.ಗಾ ತಾಯಿ ಮೈಮುನ್ನಿಸಾ ಸೈಯದ್ ಸಾದಿಕ್ ಬಿನ್ ಸೈಯದ್ ನಾಸಿರ್ ಮೈ.ಗಾ.ತಾಯಿ ಮೈಮುನ್ನಿಸಾ, ಜಂಟಿ	ಸ್ವಂತ	112/ ಬ್ಲಾಕ್–3	ಸ.ನಿ.ತರಿ	112ರ ಉಳಿಕೆ	127,	ಸೈಯದ್ ಸಿರಾಜ್ ಜಮೀನು	ಸೈಯದ್ ಅರಬ್‌ಜಾನ್ ಜಮೀನು	0–35	4–38	–

1	2	3	4	5	6	7	8	9	10	11	12
5	1) ಸೈಯದ್ ಸಮೀವುಲ್ಲಾ ಬಿನ್ ಸೈಯದ್ ಅಹ್ಮದ್	ಸ್ವಂತ	126/ಬ್ಲಾಕ್–2	ಸ.ನಿ.ತರಿ	ರಸ್ತೆ	126	ಸೈಯದ್ ರಫೀಕ್ ರ ಜಮೀನು	127,128	1–20	7–50	ಭತ್ತ
	2) ಸೈಯದ್ ರಫೀಕ್ ಬಿನ್ ಸೈಯದ್ ಅಹ್ಮದ್	ಸ್ವಂತ	126/ಬ್ಲಾಕ್–3	ಸ.ನಿ.ತರಿ	ರಸ್ತೆ	126ರ ಉಳಿಕೆ	ಸೈಯದ್ ಅಮೀರ್ ರ ಜಮೀನು	ಸೈಯದ್ ಸಮೀವುಲ್ಲಾ ಜಮೀನು	1–20	7–50	ಭತ್ತ
	3) ಸೈಯದ್ ಅಮೀರ್ ಬಿನ್ ಸೈಯದ್ ಗೌಸ್	ಸ್ವಂತ	126/ಬ್ಲಾಕ್–2	ಸ.ನಿ.ತರಿ	ರಸ್ತೆ	126ರ ಉಳಿಕೆ	132	ಸೈಯದ್ ರಫೀಕ್‌ರ ಜಮೀನು	1–20	7–50	ಭತ್ತ
6	ಫಾತೀಮಾಬಿ ಕೋಂ ಸೈಯದ್ ರಜಾಕ್	ಸ್ವಂತ	128/ಬ್ಲಾಕ್–2	ಸ.ನಿ.ತರಿ	ರಸ್ತೆ	128ರ ಉಳಿಕೆ	126	112	2–20	12–50	ಭತ್ತ
7	ಪ್ಯಾರಿಜಾನ್ ಬಿನ್ ರಶೀದ್ ಖಾನ್	ಸ್ವಂತ	130	ಖುಷ್ಕಿ ಸ.ನಿ.ತರಿ	ತುಂಗಾ ನದಿ	ರಸ್ತೆ	131	129	1–18 0–28 ಪಿ.ಕೆ.0–02	0–45 3–50	ನಂದಿ ಮರ–1 ನೇರಳೆ ಮರ–1 ಮದ್ದಾಲೆ ಮರ–2 ಸಾಗುವಾನಿ ಸಸಿ–1 ಅಡಿಕೆ–400
8	ಸೈಯದ್ ಇನ್ಯೂಪ್, ಬಾಷದ್ ಹಲಿಮಾಖಾತು, ಸೈಯದ್ ಮನ್ವರ್ ಪಾಷಾ, ಅಬ್ದುಲ್ ಆರೀಫ್, ಮಹಮ್ಮದ್ ಫಾರುಕ್	ಬಾಷಿದಾ ಬಿನ್ ಯೂಸೂಫ್‌ಖಾನ್ ಪೌತಿ ವಾರಸುದಾರರು ಪತ್ನಿ ಮಹಬೂಬ್ ಖಾತೂನ್	95/2	ಸ.ನಿ.ತರಿ	95/3	95/2ರ ಉಳಿಕೆ	ರಸ್ತೆ	ಮಜಿರೆ	1–00	5–12	–
9	ಅಬ್ದುಲ್ ಆರಿಫ್ ಬಿನ್ ಅಬ್ದುಲ್ ಜಬ್ಬಾರ್.	ಸ್ವಂತ	95/3	ಸ.ನಿ.ತರಿ	95/4	95/2	ರಸ್ತೆ	ಮಜಿರೆ	0–28	3–65	–
10	ಮಹಮದ್ ಫಾರುಕ್ ಬಿನ್ ಅಬ್ದುಲ್ ಜಬ್ಬಾರ್.	ಸ್ವಂತ	95/4	ಸ.ನಿ.ತರಿ	96	95/3	ರಸ್ತೆ	ಮಜಿರೆ	0–12	1–54	–

1	2	3	4	5	6	7	8	9	10	11	12
11	ಅಬಜಾ ಬಾನು, ಕೋಂ ಸೈಯದ್ ಗೌಸ್, ಸೈಯದ್ ಮುಜಬುಲ್ಲಾ ಬಿನ್ ಸೈಯದ್ ಗೌಸ್, ರೇಷ್ಮಾ ಕೋಂ ವಜೀದ್ ಸೈಯದ್ ಕರೀಂ ಬಿನ್ ಸೈಯದ್ ಗೌಸ್, ಅಬ್ದುಲ್ ಗನಿ ಬಿನ್ ಅಬ್ದುಲ್ ಖಾಲೀಕ್ ಅಬ್ದುಲ್ ಮಜೀದ್ ಬಿನ್ ಅಬ್ದುಲ್ ಖಾಲೀಕ್	ತಬ್ರೇಜ್ ಯೂಸುಫ್‌ಸಿದ್ದಕಿ ಬಿನ್ ನಕೀರ್ ಅಹಮ್ಮದ್	96/1	ಸ.ನಿ.ತರಿ ಖುಷ್ಕಿ	96/5	96/2	ರಸ್ತೆ	ತುಂಗಾ ನದಿ	0–26 0–03	3–16 0–02	–
		ಸುಮನ್‌ಕಳವಾಡ ಕೋಂ ದಿಲೀಪ್‌ಕುಮಾರ್	96/5	ಖುಷ್ಕಿ ಸ.ನಿ.ತರಿ	96/6	96/1	ರಸ್ತೆ	ತುಂಗಾ ನದಿ	0–02 0–12	0–01 1–46	–
		ವನಿತಾಕುಮಾರಿ ಕೋಂ ಸಾಂಕಲ್‌ಚಂದ್ ಬಾಂಗ್ರೇಜ್	96/6	ಖುಷ್ಕಿ ಸ.ನಿ.ತರಿ	97	96/5	ರಸ್ತೆ	ತುಂಗಾ ನದಿ	0–01 0–14	0–01 1–70	–
12	ಮಹಮ್ಮದ್ ಅತೀಕ್, ಬಿನ್ ಅಬ್ದುಲ್ ಜಬ್ಬಾರ್	ಸ್ವಂತ	96/2	ಸ.ನಿ.ತರಿ ಖುಷ್ಕಿ	96/1	96/3	ರಸ್ತೆ	ತುಂಗಾ ನದಿ	0–19 0–04	2–30 0–03	–
13	ಮಹಮದ್ ರಫೀಕ್ ಬಿನ್ ಅಬ್ದುಲ್ ಜಬ್ಬಾರ್	ಸ್ವಂತ	96/3	ಸ.ನಿ.ತರಿ ಖುಷ್ಕಿ	96/2	96/4	ರಸ್ತೆ	ತುಂಗಾ ನದಿ	0–19 0–04	2–30 0–03	–
14	ಮಹಮದ್ ಫಾರುಕ್ ಬಿನ್ ಅಬ್ದುಲ್ ಜಬ್ಬಾರ್	ಸ್ವಂತ	96/4	ತರಿ	96/3	95	ರಸ್ತೆ	ತುಂಗಾ ನದಿ	0–10 0–01	1–21 0–01	–
									23–22		

ಒಟ್ಟು ಇಪ್ಪತ್ಮೂರು ಎಕರೆ ಇಪ್ಪತ್ತೆರಡು ಗುಂಟೆಗಳು ಮಾತ್ರ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಶಿವಯೋಗಿ ಸಿ ಕಳಸದ,

ಆಯುಕ್ತರು,

ಪುನರವಸತಿ, ಪುನರ್‌ನಿರ್ಮಾಣ ಹಾಗೂ ಭೂಸ್ವಾಧೀನ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು,

ಕಂದಾಯ ಇಲಾಖೆ, ಕೃ.ಮೇ.ಯೋ. ಬಾಗಲಕೋಟೆ.

P.R.18

SC-25

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಜಿಲ್ಲಾಧಿಕಾರಿಗಳು ಹಾಗೂ ಸಮೂಹ ವ್ಯವಸ್ಥಾಪಕರು, ಭೂಸ್ವಾಧೀನ, ಪುನರವಸತಿ ಮತ್ತು ಪುನರ್‌ನಿರ್ಮಾಣ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು, ಇವರ ಕಾರ್ಯಾಲಯ

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ, 2013ರ (ದಿನಾಂಕ 01.01.2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ರೊಂದಿಗೆ ಓದಲಾದ ಕಲಂ 11(1)ರಲ್ಲಿ ಮಾಡಿದ ಅಧಿಸೂಚನೆ.

ಸಂಖ್ಯೆ: ಎಲ್‌ಎಕ್ಯೂಸಿಆರ್/206/2013-14, ಬೆಂಗಳೂರು, ದಿನಾಂಕ:30-11-2015.

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ರಸ್ತೆ ವಿಸ್ತರಣೆಗಾಗಿ ಅಗರ ಗ್ರಾಮದ ಆಸ್ತಿ ಸಂಖ್ಯೆ 135ರಲ್ಲಿ 702ಚ.ಮೀ ಮತ್ತು 136ರಲ್ಲಿ 760 ಚ.ಮೀ ಸಾರ್ವಜನಿಕ ಬಳಕೆಗಾಗಿ ಬೇಕಾಗುವುದೆಂದು ಜಿಲ್ಲಾಧಿಕಾರಿಗಳು, ಭೂಸ್ವಾಧೀನ ಮತ್ತು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಬೆಂಗಳೂರು ಜಿಲ್ಲಾಧಿಕಾರಿಗಳವರಿಗೆ ಕಂಡು ಬಂದಿರುತ್ತದೆ.

ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013ರ (ದಿನಾಂಕ 01.01.2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕರ್ನಾಟಕ ಸರ್ಕಾರದ ಆದೇಶ ಸಂ.ಕಂ.ಇ.18:ಆರ್‌ಇಎಚ್:2014 ದಿನಾಂಕ 06.02.2014ರಂತೆ ಹೊಸ ಕಾಯ್ದೆ 2013ರ ಕಲಂ 11ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30ನೇ ಕಾಯ್ದೆ) ಸದರ ಕಾನೂನಿನ ಕಲಂ 12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೆಂಗಳೂರು ಇವರಿಗೆ ನೀಡಲಾಗಿದೆ ಹಾಗೂ ಕಲಂ 43ರ ಮೇರೆಗೆ ಪುನರ್‌ವಸತಿ ಪುನರನಿರ್ಮಾಣದ ಅಧಿಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ಪುನರ್‌ವಸತಿ ಅಧಿಕಾರಿಗಳು/ವಿಶೇಷ ಭೂಸ್ವಾಧೀನಾಧಿಕಾರಿಗಳು ಇವರಿಗೆ ನೀಡಲಾಗಿದೆ.

ಸರ್ಕಾರದ ಆದೇಶ ಸಂ.ಕಂ.ಇ.36.ಭೂಸ್ವಾವಿ2014 ದಿನಾಂಕ 13.03.2014ರನ್ವಯ ಮತ್ತು ತಿದ್ದುಪಡಿ ಆದೇಶ ದಿನಾಂಕ 22.04.2014ರನ್ವಯ ಕಲಂ 6(2)ರ ಅಡಿಯಲ್ಲಿ ನೀರಾವರಿ ಯೋಜನೆಗಳಿಗಾಗಿ ಭೂಸ್ವಾಧೀನಪಡಿಸುವಾಗ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ (Environment Impact Assessment) ಪ್ರಕ್ರಿಯೆಯನ್ನು ಬೇರಾವುದೇ ಕಾಯ್ದೆಗಳಡಿಯಲ್ಲಿ ಮಾಡಬೇಕಾದಲ್ಲಿ ಸಾಮಾಜಿಕ ನಿರ್ಧರಣದ ಅಂಶ (Social Impact Assessment) ಅನ್ವಯಿಸುವುದಿಲ್ಲವೆಂದು ಸ್ಪಷ್ಟಿಕರಿಸಿದೆ.

ಈ ಸ್ವತ್ತಿಗೆ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಿಣಿದಾರರಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರು ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರನಿರ್ಮಾಣ ಕಾಯ್ದೆ 2013ರ ಕಾಯ್ದೆ ಕಲಂ 14(4)ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ,

ಅನುಸೂಚಿ

ಜಿಲ್ಲೆ : ಬೆಂಗಳೂರು ನಗರ **ತಾಲ್ಲೂಕು: ಬೆಂಗಳೂರು ದಕ್ಷಿಣ** **ಹೋಬಳಿ : ಕೆಂಗೇರಿ-3** **ಗ್ರಾಮ : ಅಗರ**

ಕ್ರ.ಸಂ	ಖಾತೆದಾರರ ಹೆಸರು/ ಅನುಭವದಾರರ ಹೆಸರು	ಸರಕಾರಿ/ಸ್ವಂತ	ಆಸ್ತಿ ಸಂಖ್ಯೆ	ಜಮೀನಿನ ತರಹೆ	ಚಕ್ಕುಬಂದಿ				ಬೇಕಾದ ಜಮೀನಿನ		ಷರಾ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಕ್ಷೇತ್ರ ಚ.ಮೀ	ಆಕಾರ ರೂ.ಪೈ	
1	ತಿಮ್ಮರಾಯಪ್ಪ ಬಿನ್ ಬೆಟ್ಟಯ್ಯ	ಸ್ವಂತ	135 ಪೈ.ಕಿ	ನಿವೇಶನ	ರಸ್ತೆ	ತಿಮ್ಮರಾಯಪ್ಪ	ರಸ್ತೆ	ಉಳಿಕೆ	702		
2	ತಿಮ್ಮರಾಯಪ್ಪ ಬಿನ್ ಬೆಟ್ಟಯ್ಯ	ಸ್ವಂತ	136 ಪೈ.ಕಿ	ನಿವೇಶನ	ರಂಗರಾಜು	ರಸ್ತೆ	ರಸ್ತೆ	ಉಳಿಕೆ	760		

PR-17 ವಿಶೇಷ ಭೂಸ್ವಾಧೀನಾಧಿಕಾರಿಗಳು ಜಿಲ್ಲಾಧಿಕಾರಿಗಳು,
SC-25 ಬೆಂಗಳೂರು ಬೆಂಗಳೂರು ಜಿಲ್ಲೆ, ಬೆಂಗಳೂರು.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59.